ಒಮ್ಮೆ, ಹಳೆಯದಾಗಿ ಬಿರುಕುಬಿಟ್ಟಿದ್ದ ಒಂದು ಸೇತುವೆಯ ಮೇಲೆ ಆ ಪಾದ್ರಿಯು ನಡೆದುಹೋಗುತ್ತಿದ್ದನು. ಬಹಳ ಶಿಥಿಲವಾಗಿದ್ದರಿಂದಲೋ ಅಥವಾ ಅವನ ಕರ್ಮದ ಫಲವಾಗಿಯೋ, ಅದು ಆಕಸ್ಮಿಕವಾಗಿ ಮುರಿದುಬಿತ್ತು. ಆಗ ಪಾದ್ರಿಯು ತನಗೆ ಅಭ್ಯಾಸವಾಗಿದ್ದಂತೆ, "ಎಂತಹ ನರಕ!" ಎಂದು ಅರಚುತ್ತಾ, ಕೆಳಕ್ಕೆ ಬಿದ್ದು ಪ್ರಾಣಬಿಟ್ಟನೇ ಹೊರತು, ಅವನಿಗೆ ದೇವರನ್ನು ನೆನೆಯಲಾಗಲಿಲ್ಲ. ಇದಕ್ಕೆ ಕಾರಣ, ಅವನು ಮಾಡಿಕೊಂಡಿದ್ದ 'ಎಂತಹ ನರಕ!' ಎಂದು ಹೇಳಿಕೊಳ್ಳುವ ಕೆಟ್ಟ ಹವ್ಯಾಸ.

"ನಾವು ಮಾಡುವ ಪ್ರತಿಯೊಂದು ಕರ್ಮ ಅಥವಾ ಆಲೋಚನೆಯೂ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ" ಎಂದು ಮೇಲಿನ ಕಥೆಯು ಮಾರ್ಮಿಕವಾಗಿ ತಿಳಿಸುತ್ತದೆ. ಸ್ವಾಮಿ ವಿವೇಕಾನಂದರ ಪ್ರಕಾರ, "ಈಗ ನಾವೇನಾಗಿರುವೆವೋ, ಅದು ನಮ್ಮ ಹಿಂದಿನ ಕರ್ಮಗಳ ಫಲವಾಗಿದ್ದರೆ, ಮುಂದೆ ನಾವು ಹೇಗೆ ಆಗಬೇಕೆನ್ನುವುದು ನಮ್ಮ ಇಚ್ಛೆ ಮತ್ತು ಈಗಿನ ಕರ್ಮಗಳ ಮೇಲೆಯೇ ಅವಲಂಬಿಸಿರುತ್ತದೆ."

ಈ ಸತ್ಯವನ್ನು ತಿಳಿದುಕೊಂಡು, ಒಳ್ಳೆಯ ಚಿಂತನೆಗಳನ್ನೂ, ಕಾರ್ಯಗಳನ್ನೂ ಮಾಡುವ ಅಭ್ಯಾಸ ಮಾಡಿದರೆ, ಸುಖ-ಶಾಂತಿಗಳಿಗಾಗಿ ಬೇರೆಲ್ಲೂ ಹೋಗಬೇಕಾದ್ದಿಲ್ಲ. ನಮ್ಮ ಕರ್ಮವೇ ನಮಗೆ ಶಾಂತಿ ನೆಮ್ಮದಿಗಳನ್ನು ನೀಡುತ್ತದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

### ಕರ್ತವ್ಯ ಮತ್ತು ಅದರ ಪಾತ್ರ

ಕರ್ಮವನ್ನು ಎಲ್ಲರೂ ಮಾಡಲೇಬೇಕು. ಅದನ್ನು ಚೆನ್ನಾಗಿ ಮಾಡುವುದಕ್ಕೆ ಅದರ ಮಹತ್ವವನ್ನು ತಿಳಿದುಕೊಳ್ಳಬೇಕು. ಆಮೇಲೆ ಅದನ್ನು ಕಾರ್ಯರೂಪಕ್ಕೆ ತರುವ ಕುಶಲತೆಯನ್ನು ಕಲಿತುಕೊಳ್ಳಬೇಕು. **ಯೋಗಃ ಕರ್ಮಸು ಕೌಶಲಂ** – ಈ ಕುಶಲತೆಯನ್ನೇ ಯೋಗ ಎಂದು ಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ.

ಸ್ವಾಮಿ ವಿವೇಕಾನಂದರು ಕರ್ಮಯೋಗದ ವಿವಿಧ ಹಂತಗಳಲ್ಲಿ, ವಿವಿಧ ಉಪಾಯಗಳನ್ನು ಸೂಚಿಸುತ್ತಾರೆ. ಮೊದಲನೆಯದಾಗಿ, "ನಾವು ಏನನ್ನಾದರೂ ಮಾಡಬೇಕಾಗಿ ಬಂದರೆ, ಅದು ನಮ್ಮ ಕರ್ತವ್ಯ ಎಂಬುದನ್ನು ಮೊದಲು ತಿಳಿಯಬೇಕು. ತರುವಾಯ, ಅದನ್ನು ಚೆನ್ನಾಗಿ ಮಾಡಲು ಶಕ್ತರಾಗುವೆವು" ಎಂದು ಅವರು ಹೇಳುತ್ತಾರೆ. ಕರ್ತವ್ಯದ ಕಲ್ಪನೆ ಕಾಲ, ದೇಶ ಮತ್ತು ಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತದೆ. "ದೈವೋನ್ಮುಖವಾಗಿ ನಮ್ಮನ್ನು ಮುಂದುವರಿಸುವ ಕರ್ಮವು ಅದಾವುದೇ ಆಗಲಿ ಸತ್ಕರ್ಮ, ಸತ್ಕ್ರಿಯೆ. ಅದನ್ನು ಮಾಡುವುದು ನಮ್ಮ ಕರ್ತವ್ಯ. ಹಾಗೆಯೇ ನಮ್ಮನ್ನು ಅಧೋಮುಖವಾಗಿ ಅಂದರೆ, ದೈವವಿಮುಖರನ್ನಾಗಿ ಮಾಡುವ ಕರ್ಮಗಳು ನಮ್ಮ ಕರ್ತವ್ಯವಲ್ಲ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದಲ್ಲದೆ, "ಯಾವ ಸಮಾಜದ ಮಧ್ಯದಲ್ಲಿ ನಾವು ಜನ್ಮವೆತ್ತಿದ್ದೇವೆಯೋ ಅದರ ವಿವಿಧ ಚಟುವಟಿಕೆಗಳು ಮತ್ತು ಆದರ್ಶಗಳಿಗೆ ಅನುಸಾರವಾಗಿ ನಮಗೆ ಉತ್ಕರ್ಷವನ್ನು ಉಂಟುಮಾಡುವ, ನಮ್ಮನ್ನು ಔನ್ನತ್ಯಕ್ಕೆ ಏರಿಸುವ ಕಾರ್ಯವನ್ನು ಯಾವಾಗಲೂ ಮಾಡುವುದು ನಮ್ಮ ಕರ್ತವ್ಯ" ಎಂದೂ ಹೇಳುತ್ತಾರೆ.

ಕರ್ತವ್ಯ ಎಂದರೆ 'ಸ್ವಧರ್ಮ' ಎಂದೂ ಅರ್ಥಮಾಡಬಹುದು. ವಿದ್ಯಾರ್ಥಿಗೆ ವಿದ್ಯೆಯನ್ನು ಗಳಿಸುವುದೇ ಕರ್ತವ್ಯ. ತಂದೆತಾಯಿಗಳಿಗೆ ಮಕ್ಕಳ ಲಾಲನೆ-ಪೋಷಣೆ ಕರ್ತವ್ಯವಾಗುತ್ತದೆ. ಇವೆಲ್ಲವನ್ನೂ ಸ್ಥೂಲವಾಗಿ 'ಕರ್ತವ್ಯ' ಎಂದು ಕರೆಯಬಹುದು. ಕರ್ತವ್ಯಕ್ಕೆ ಪ್ರೀತಿಯನ್ನು ಸೇರಿಸಬೇಕು. ಸ್ವಾಮೀಜಿ ಹೇಳುತ್ತಾರೆ, "ಕರ್ತವ್ಯವು ಸವಿಯಾಗಿರುವುದು ಅಪರೂಪ. ಅದರ ಚಕ್ರಗಳಿಗೆ ಪ್ರೇಮದ ಎಣ್ಣೆಯನ್ನು ಹಚ್ಚುವುದರಿಂದ ಮಾತ್ರವೇ ಅದು ಸುಲಭವಾಗಿ ಚಲಿಸುವುದು."

**ಯಾವುದು ಉತ್ತಮವಾದ ಕರ್ತವ್ಯ?** ಸ್ವಾಮಿ ವಿವೇಕಾನಂದರ ಪ್ರಕಾರ, "ಸ್ವಾರ್ಥರಹಿತ ಪ್ರೇರಣೆಯಿಂದ ಮಾಡುವ ಕೆಲಸವೇ ಉತ್ತಮ ಕರ್ತವ್ಯ. ಕರ್ತವ್ಯಜ್ಞಾನದ ಮೂಲಕ ಮಾಡಿದ ಕರ್ಮವೇ, ಕರ್ತವ್ಯಭಾವನೆಯಿಲ್ಲದ ಕರ್ಮಕ್ಕೆ ದಾರಿಮಾಡಿಕೊಡುವುದು. ಆಗ ನಾವು ಮಾಡುವ ಕರ್ಮ ಉಪಾಸನೆಯಂತೆ, ಪೂಜೆಯಂತೆ ಆಗುವುದು." ಮುಂದುವರಿದು ಅವರು ಹೀಗೆ ಹೇಳುತ್ತಾರೆ: "ಸ್ವಾರ್ಥವೇ ಪಾಪ. ಅದನ್ನು ಯಾವಾಗಲೂ ತ್ಯಜಿಸಬೇಕು... ನಿಸ್ವಾರ್ಥತೆಯೇ ಪುಣ್ಯ. ಅದು ಸರ್ವದಾ ಅನುಸರಣೀಯವಾದುದು."

ಕರ್ಮದ ಆಧ್ಯಾತ್ಮಿಕ ಪ್ರಯೋಜನದ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಕರ್ಮದ ಉದ್ದೇಶ ಅಲ್ಪಾತ್ಮವನ್ನು ನಿಗ್ರಹಿಸಿ ಉನ್ನತ ಆತ್ಮವು ಬೆಳಗುವಂತೆ ಮಾಡುವುದು. ನಮ್ಮ ತುಚ್ಛ ಅಭಿಲಾಶೆಗಳು ಮೇಲೇಳದಂತೆ ಅವುಗಳನ್ನು ಸರ್ವದಾ ತಡೆಯುವುದರಿಂದ ಇದು ಸಿದ್ಧಿಸುವುದು. ಕರ್ತವ್ಯಪಾಲನೆಗೆ ಇದು ಅತ್ಯವಶ್ಯಕ. ಅರಿತೋ ಅರಿಯದೆಯೋ, ಈ ಕರ್ಮತತ್ತ್ವದ ಅವಲಂಬನದಿಂದಲೇ ಒಟ್ಟು ಸಮಾಜ ಬೆಳೆಯುತ್ತಿರುವುದು. ಅಲ್ಲದೆ, ಮನುಷ್ಯ ಸ್ವಾರ್ಥಪರವಾದ ತನ್ನ ತುಚ್ಛ ಆಸೆಗಳನ್ನು ಕಡಮೆ ಮಾಡಿಕೊಳ್ಳುವುದರಿಂದ ಆತನ ಯಥಾರ್ಥ ಸ್ವರೂಪದ ಅಪಾರವಾದ ಅಭಿವೃದ್ಧಿಗೆ ಮಾರ್ಗವುಂಟಾಗುತ್ತದೆ ಎಂಬುದು ಅನುಭವಸಿದ್ಧ."

### ಕರ್ಮಯೋಗ

ಕರ್ತವ್ಯವನ್ನು ಹೊರೆ ಎಂದು ಭಾವಿಸುತ್ತೇವೆ. ಆದರೆ ಅದನ್ನು ನಿಸ್ವಾರ್ಥಭಾವದಿಂದ ಮಾಡುತ್ತ ಹೋದಲ್ಲಿ, ಅದು 'ಕರ್ಮಯೋಗ'ವಾಗಿ ಪರಿಣಮಿಸುತ್ತದೆ. ಇಲ್ಲಿ ಒಂದು ವೈಶಿಷ್ಟ್ಯವನ್ನು ಗಮನಿಸಬಹುದು. ದೇವರಲ್ಲಿ ನಂಬಿಕೆ ಇಲ್ಲದವನೂ ಕರ್ಮಯೋಗವನ್ನು ಆಚರಿಸಬಹುದು. "ದೇವರಲ್ಲಿ ನಂಬಿಕೆಯಿರುವ ಭಕ್ತನು ಕರ್ಮವನ್ನು ದೇವತಾರ್ಪಣ ಬುದ್ಧಿಯಿಂದ ಮಾಡಿದಾಗ ಅದು 'ಕರ್ಮಯೋಗ' ವಾಗುತ್ತದೆ. ಭಗವಂತನಲ್ಲಿ ನಂಬಿಕೆ ಇಲ್ಲದವನು ಕೇವಲ ಕರ್ಮಕ್ಕೋಸ್ಕರ ಕರ್ಮವನ್ನು ಮಾಡಿದಲ್ಲಿ, ಅದು ಕರ್ಮಯೋಗವಾಗುತ್ತದೆ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

### ಕರ್ಮಯೋಗದಿಂದ ನಮಗೆ ಲಾಭ, ಪರರಿಗಲ್ಲ!

**ಪ್ರಯೋಜನಮ್ ಅನುದ್ದಿಶ್ಯ ನ ಮಂದೋऽಪಿ ಪ್ರವರ್ತತೇ** – ಪ್ರಯೋಜನವಿಲ್ಲದೆ ಯಾವ ಕೆಲಸವನ್ನೂ ದಡ್ಡನೂ ಮಾಡುವುದಿಲ್ಲ. ಸಾಮಾನ್ಯವಾಗಿ ನಾವು ಮಾಡುವ ಕರ್ಮಗಳು ಫಲಾಪೇಕ್ಷೆಯಿಂದ ಕೂಡಿರುತ್ತವೆ. ಅಂದರೆ ಸ್ವಾರ್ಥದಿಂದ ಪ್ರೇರೇಪಿತವಾಗಿರುತ್ತವೆ. ಆದ್ದರಿಂದ ಕರ್ಮಯೋಗವು ಏತಕ್ಕೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಎಲ್ಲಾ ಸಮಯದಲ್ಲೂ ಪ್ರಯೋಜನವನ್ನು ಏಕೆ ಬಯಸಬೇಕು ಎಂಬ ಪ್ರಶ್ನೆಯನ್ನು ಸ್ವಾಮಿ ವಿವೇಕಾನಂದರು ನಮ್ಮ ಮುಂದಿಡುತ್ತಾರೆ. ಅದಲ್ಲದೆ, ನಾವು ಮಾಡುವ ಕರ್ಮದಿಂದ ನಮಗೇ ಒಳಿತಾಗುತ್ತದೆ, ಪ್ರಪಂಚಕ್ಕಲ್ಲ ಎನ್ನುತ್ತಾರೆ.

ಜಡತ್ವಕ್ಕಿಂತ ಕ್ರಿಯಾಶೀಲತೆ ಉತ್ತಮ. ಆದರೆ ಕಾಮ್ಯ ಕರ್ಮಗಳಲ್ಲಿ ಫಲಾಪೇಕ್ಷೆಯ ಫಲವಾಗಿ ಸುಖ, ಲಾಭಗಳ ಜೊತೆಗೆ ದುಃಖ, ನಷ್ಟಗಳೂ ತಪ್ಪಿದ್ದಲ್ಲ. ಇದಲ್ಲದೆ ಫಲದ ಕುರಿತು ಚಿಂತಿಸುತ್ತ, ಎಷ್ಟೋ ಬಾರಿ ನಾವು ಕರ್ಮಗಳನ್ನು ಸಮರ್ಪಕವಾಗಿ ಮಾಡಲು ಅಸಮರ್ಥರಾಗುತ್ತೇವೆ. ಫಲಾಪೇಕ್ಷೆಯು ನಮ್ಮ ಮನಸ್ಸಿನ ಶಕ್ತಿಯನ್ನು ಕುಗ್ಗಿಸುತ್ತದೆ; ಹರಿದು ಹಂಚಿಹಾಕುತ್ತದೆ. ಒಳ್ಳೆಯದನ್ನು ಮಾಡುತ್ತ, ಚಿಂತಿಸುತ್ತ ಹೋದಲ್ಲಿ ನಮ್ಮ ಚಾರಿತ್ರ್ಯ ಸದ್ಗುಣಗಳಿಂದ ಕೂಡಿರುತ್ತದೆ, ಕೆಟ್ಟ ಆಲೋಚನೆಗಳು ಕ್ಷೀಣಿಸುತ್ತವೆ. ನಾವು ಮಾಡುವ ಕರ್ಮದಿಂದ ನಮಗೇ ಶಿಕ್ಷಣವು ಲಭಿಸುತ್ತದೆ ಎಂಬ ಮಾತನ್ನು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಮನುಷ್ಯನೊಬ್ಬನ ಜೀವನಶೈಲಿಯನ್ನು ನಾವು ಗಮನಿಸಿದರೆ, ಸುಖ–ದುಃಖಗಳೇ ನಮಗೆ ಪಾಠ ಕಲಿಸುವ ಮಹಾನ್ ಶಿಕ್ಷಕರು ಎಂಬ ಸತ್ಯಸಂಗತಿಯನ್ನು ನಾವು ತಿಳಿಯುತ್ತೇವೆ. ಕೇವಲ ಕರ್ಮಕ್ಕಿಂತ, ಕರ್ಮಯೋಗದಿಂದಲೇ ಹೆಚ್ಚು ಶಾಂತಿ, ನೆಮ್ಮದಿಗಳು ನಮಗೆ ಲಭಿಸುತ್ತವೆ. ಮುಖ್ಯವಾಗಿ ಈ ಪ್ರಪಂಚವು ನಾಯಿಯ ಬಾಲದಂತೆ ಡೊಂಕು, ಅದನ್ನು ಸರಿಪಡಿಸುವುದು ಅಸಾಧ್ಯವಾದ ಮಾತು, ಇದರ ಬದಲಾಗಿ ನಾವು ಬದಲಾಗಬೇಕು. ವಾಸ್ತವವಾಗಿ ನಾವು ಒಳ್ಳೆಯದು–ಕೆಟ್ಟದ್ದು ಎಂದು ಏನನ್ನು ಕರೆಯುತ್ತೇವೆಯೋ, ಅದು ಬಹುತೇಕ ನಮ್ಮ ದೃಷ್ಟಿಕೋನವನ್ನೇ ಅವಲಂಬಿಸಿರುತ್ತದೆ ಎಂಬ ಮಹಾನ್ ಸತ್ಯವೊಂದನ್ನು ಸ್ವಾಮಿ ವಿವೇಕಾನಂದರು ನಮಗೆ ಬೋಧಿಸುತ್ತಾರೆ. ಇದರಿಂದ ಯಾವುದೇ ಸನ್ನಿವೇಶ, ವಸ್ತು ಮತ್ತು ವ್ಯಕ್ತಿ ನಮ್ಮ ಮನಶ್ಶಾಂತಿಯನ್ನು ಅಷ್ಟು ಸುಲಭವಾಗಿ ಕದಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಕರ್ಮಯೋಗದ ಅಭ್ಯಾಸದಿಂದ ಪ್ರಪಂಚದ ವಾಸ್ತವಿಕತೆಯು ನಮಗೆ ಚೆನ್ನಾಗಿ ಮನದಟ್ಟಾಗಿರುತ್ತದೆ.

ಸ್ವಾಮಿ ವಿವೇಕಾನಂದರ ಕರ್ಮಯೋಗವನ್ನು ಅಭ್ಯಾಸ ಮಾಡಿದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಧ್ಯೇಯವನ್ನು ಮುಟ್ಟಲು ಸಾಧ್ಯ. ನಮ್ಮ ಶೀಲದ ಮೇಲೆ ನಾವು ಮಾಡುವ ಕರ್ಮದ ಪರಿಣಾಮವನ್ನು ತಿಳಿದುಕೊಂಡಲ್ಲಿ, ನಾವು ಸತ್ಕರ್ಮಗಳನ್ನು ಮಾತ್ರವೇ ಮಾಡಲು ಪ್ರಯತ್ನಿಸುತ್ತೇವೆ. ದುಶ್ಚಟಗಳಿಗೆ ಗುರಿಯಾಗಿರುವ ಜನರು ಅದನ್ನು ಬಿಟ್ಟುಬಿಡಲು ಯತ್ನಿಸಿ, ಉತ್ತಮ ಶೀಲವನ್ನು ಬೆಳೆಸಿಕೊಳ್ಳುತ್ತಾರೆ. ಈ ವಿಧಾನದಿಂದ ವಿದ್ಯಾರ್ಥಿಯು ಅಧ್ಯಯನದಲ್ಲಿ ಆಸಕ್ತಿ, ಏಕಾಗ್ರತೆ ಮುಂತಾದುವುಗಳನ್ನು ಬೆಳೆಸಿಕೊಳ್ಳಬಹುದು. ಇವು ಶೀಲದ ಮೇಲೆ ಕರ್ಮದ ಪರಿಣಾಮಕ್ಕೆ ಒಂದು ಉತ್ತಮ ಉದಾಹರಣೆ.

ಕರ್ಮಯೋಗವನ್ನು ಅಭ್ಯಾಸ ಮಾಡಿದರೆ, ಕಛೇರಿಯಲ್ಲಿ ಉದ್ಯೋಗಿಯು ತನ್ನ ಮೇಲಿನ ಅಧಿಕಾರಿಗಳನ್ನು ಕಂಡು ತಾನು ಕೀಳು ಎಂದೆಣಿಸಬೇಕಾಗಿಲ್ಲ. ಏಕೆಂದರೆ ಕರ್ಮದಲ್ಲಿ ಮೇಲು, ಕೀಳೆಂಬ ಭೇದಭಾವವಿಲ್ಲ. ಹಾಗೆಯೇ ಕರ್ಮರಹಸ್ಯ ಅಥವಾ ಕರ್ತವ್ಯದ ಬಗ್ಗೆ ತಿಳಿದ ಮೇಲೆ ಯಾರೂ ಸೋಮಾರಿಯಾಗಿರಲು ಸಾಧ್ಯವಿಲ್ಲ. ಸ್ವಾರ್ಥಕ್ಕಿಂತ ನಿಸ್ವಾರ್ಥವೇ ಮೇಲು ಎನ್ನುವ ಮಾತನ್ನು ನಾವು ಅಭ್ಯಾಸ ಮಾಡಿದಲ್ಲಿ ಬಡವರ, ಭಿಕ್ಷುಕರ, ದೀನರ ಸಂಖ್ಯೆ ಈ ದೇಶದಲ್ಲಿ ಕಡಮೆಯಾದೀತು. ಸ್ವಾಮಿ ವಿವೇಕಾನಂದರ ಕರ್ಮಯೋಗದ ಕುರಿತು ಒಂದೇ ಮಾತಿನಲ್ಲಿ ಹೇಳುವುದಾದರೆ, ಮಹಾತ್ಮ ಗಾಂಧೀಜಿಯವರ ಕನಸಾದ ರಾಮರಾಜ್ಯವು, ಸ್ವಾಮಿ ವಿವೇಕಾನಂದರ ಕರ್ಮಯೋಗದ ಅನುಷ್ಠಾನದಿಂದ ಮಾತ್ರವೇ ನಿರ್ಮಾಣವಾಗಲು ಸಾಧ್ಯ. •

# ಶ್ರೀಮಾತೆ ಮತ್ತು ಆಧುನಿಕ ಮಹಿಳೆ

*(ಡಿಸೆಂಬರ್ ೨೦೧೦ ರ ಸಂಚಿಕೆಯಿಂದ)*



## ಶ್ರೀರಾಮಕೃಷ್ಣ ಸಂಗಿನಿ

ಸರ್ವಮತ ಸಾಧನೆಗಳಲ್ಲಿ ಸಿದ್ಧಿಯನ್ನು ಪಡೆದ ನಂತರ ಕೆಲವೇ ವರ್ಷಗಳಲ್ಲಿ ಶ್ರೀರಾಮಕೃಷ್ಣರ ಲೀಲಾವಸಾನವಾಯಿತು. ಶ್ರೀಮಾತೆಯವರಾದರೋ ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ೩೪ ವರ್ಷಗಳ ಕಾಲ ಈ ಮರ್ತ್ಯಭೂಮಿಯಲ್ಲಿದ್ದು ಶ್ರೀರಾಮಕೃಷ್ಣಾವತಾರದ ಉದ್ದೇಶವನ್ನು ಸಾಧಿಸಲು ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟರು; ಪರಿಪೂರ್ಣ ಸಹಧರ್ಮಿಣಿಯ ಆದರ್ಶವನ್ನು ಈ ಜಗತ್ತಿಗೆ ತೋರಿಸಿಕೊಟ್ಟರು. ಆದ್ದರಿಂದಲೇ ಅವತಾರವರಿಷ್ಠರಾದ ಶ್ರೀರಾಮಕೃಷ್ಣರು ಶ್ರೇಷ್ಠ ತ್ಯಾಗೀಶ್ವರರಾಗಿರುವಂತೆ, ಶ್ರೀಮಾತೆಯವರೂ ವರಿಷ್ಠ ತ್ಯಾಗೀಶ್ವರಿಯಾಗಿ ಕಂಗೊಳಿಸುತ್ತಾರೆ. ಶ್ರೀಮಾತೆಯವರ ಪವಿತ್ರತೆಯನ್ನು ಪ್ರಶಂಸಿಸುತ್ತಾ ಶ್ರೀರಾಮಕೃಷ್ಣರೇ ಒಮ್ಮೆ ಹೀಗೆ ಹೇಳುತ್ತಾರೆ: "ಆಕೆ ಅಷ್ಟೊಂದು ಪರಿಶುದ್ಧಾತ್ಮಳಾಗಿಲ್ಲದಿದ್ದರೆ, ನನ್ನ ಸಂಯಮದ ಕಟ್ಟೆಯೊಡೆದು ಇಂದ್ರಿಯಸುಖದ ಕಡೆ ಮನಸ್ಸು ಓಲುತ್ತಿತ್ತೋ ಏನೋ, ಯಾರಿಗೆ ಗೊತ್ತು?"

ಶ್ರೀಮಾತೆಯವರ ಪವಿತ್ರತೆಯ ಪರಿಚಯವನ್ನು ಪರಿಪೂರ್ಣವಾಗಿ ಪಡೆದ ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಫಲಹಾರಿಣೀ ಕಾಳೀ ಪೂಜೆಯ ರಾತ್ರಿ ಜಗನ್ಮಾತೆಯ ಪೀಠದಲ್ಲಿ ಕೂರಿಸಿ, ವಿಧಿಪೂರ್ವಕ ಪೂಜಿಸಿದರು; ತಮ್ಮ ಹನ್ನೆರಡು ವರ್ಷಗಳ ಸುದೀರ್ಘ ಸಾಧನೆಯ ಸಮಸ್ತ ಫಲವನ್ನೂ ಶ್ರೀಮಾತೆಯವರ ಪಾದಗಳಲ್ಲಿ ಜಪಮಾಲೆಯನ್ನು ಅರ್ಪಿಸುವುದರ ಮೂಲಕ, ಸಮರ್ಪಿಸಿ, ಸಂತೃಪ್ತರಾದರು. ಅವತಾರವರಿಷ್ಠರಾದ ಶ್ರೀರಾಮಕೃಷ್ಣರ ಸಮಸ್ತ ಸಾಧನಾಫಲಗಳನ್ನೂ ಸ್ವೀಕರಿಸಬೇಕಾದರೆ, ಶ್ರೀಮಾತೆಯವರ ಆಧ್ಯಾತ್ಮಿಕ ಶಕ್ತಿ ಅದೆಷ್ಟು ಉನ್ನತವಾದದ್ದು ಎಂಬುದನ್ನು ಊಹಿಸಲೂ ಅಸಾಧ್ಯ.

ಶ್ರೀಮಾತೆಯವರು ಸುಮಾರು ೧೩-೧೪ ವರ್ಷಗಳ ಕಾಲ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಸಾನ್ನಿಧ್ಯದಲ್ಲಿ ವಾಸ ಮಾಡಿದ್ದರೂ, ಮೊದಲ ಕೆಲವು ತಿಂಗಳುಗಳ ಅನಂತರ, ಪ್ರತಿದಿನ ಶ್ರೀರಾಮಕೃಷ್ಣರ ದರ್ಶನ ಕೂಡ ಅವರಿಗೆ ಸಿಗುತ್ತಿರಲಿಲ್ಲ. ಕಾರಣ, ಶ್ರೀರಾಮಕೃಷ್ಣರ ಬಳಿಗೆ ಬರುತ್ತಿದ್ದ ಭಕ್ತರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಲೇ ಇತ್ತು. ಲಜ್ಜಾಶೀಲರಾದ ಶ್ರೀಮಾತೆಯವರಿಗೆ ಒಮ್ಮೊಮ್ಮೆ ಎರಡು ತಿಂಗಳುಗಳು ಆದರೂ ಶ್ರೀರಾಮಕೃಷ್ಣರನ್ನು ಕಣ್ಣಿನಿಂದ ನೋಡುವ ಭಾಗ್ಯ ಲಭಿಸುತ್ತಿರಲಿಲ್ಲ. ಆಗ ಅವರು ತಮ್ಮನ್ನು ಹೀಗೆಂದುಕೊಂಡು ಸಮಾಧಾನಪಟ್ಟುಕೊಳ್ಳುತ್ತಿದ್ದರಂತೆ: "ಮನಸ್ಸೇ, ನೀನೇನು ಪ್ರತಿದಿನ ಅವರ ದರ್ಶನ ಪಡೆಯುವಂತಹ ಭಾಗ್ಯವಂತೆಯೇ?" ಎಂದು. ಅವರು ತಮ್ಮ ಕೊಠಡಿಯನ್ನು ಪ್ರತ್ಯೇಕಿಸಿರುವ ಬಿದಿರಿನ ತಟ್ಟಿಯಲ್ಲಿ ಒಂದು ರಂಧ್ರವನ್ನು ಮಾಡಿ, ಅದರ ಮೂಲಕ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ನಡೆಯುತ್ತಿದ್ದ ನೃತ್ಯ, ಸಂಗೀತ, ಸಂಕೀರ್ತನಾದಿಗಳನ್ನು ನೋಡಿ, ಸಂತೃಪ್ತರಾಗುತ್ತಿದ್ದರು.

ಶ್ರೀರಾಮಕೃಷ್ಣರ ಸೇವೆಯಲ್ಲಿ ನಿರತರಾದ ಶ್ರೀಮಾತೆಯವರ ವಾಸಗೃಹವಾದರೋ ಗಿಳಿಯ ಪಂಜರದಂತಿರುವ ಸಣ್ಣದೊಂದು ಕೋಣೆ. ಆ ಸಣ್ಣ ಕೋಣೆಯೇ ಮಾತೆಯವರ ದೇವರಮನೆ, ಅಡುಗೆಮನೆ, ಉಗ್ರಾಣ, ಮಲಗುವ ಕೋಣೆ ಮಾತ್ರವಲ್ಲದೇ ಶ್ರೀರಾಮಕೃಷ್ಣರ ಮಹಿಳಾಭಕ್ತರು ರಾತ್ರಿಯಲ್ಲಿ ಮಲಗುವ ವಿಶ್ರಾಂತಸ್ಥಾನವೂ ಆಗಿತ್ತು. ಅದೂ ಅಲ್ಲದೆ ಸ್ನಾನ ಶೌಚಾದಿಗಳಿಗಂತೂ ಯಾವ ವ್ಯವಸ್ಥೆಯೂ ಇರಲಿಲ್ಲ. ಮುಂಜಾನೆ ಮೂರುವರೆಯಿಂದ ಹಿಡಿದು ರಾತ್ರಿ ಹನ್ನೊಂದು ಗಂಟೆಯವರೆಗೆ ಅವರ ದಿನನಿತ್ಯದ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಶ್ರೀರಾಮಕೃಷ್ಣರ ಸೇವೆಯ

ಜೊತೆಗೆ ಅವರ ತಾಯಿಯ ಸೇವೆಯನ್ನು ಕೂಡ ಶ್ರೀಮಾತೆಯವರು ಅತ್ಯಂತ ಪ್ರೀತಿ ಮತ್ತು ನಿಷ್ಠೆಗಳಿಂದ ಮಾಡುತ್ತಿದ್ದರು. ಇದರ ಜೊತೆಗೆ ಶ್ರೀರಾಮಕೃಷ್ಣರ ಭಕ್ತರ ಸೇವೆ ಬೇರೆ. ಭಕ್ತರಿಗೆ ಅವರವರ ರುಚಿಗೆ ಅನುಸಾರ ವಾಗಿ ಅಡುಗೆಯನ್ನು ಮಾಡುತ್ತಿದ್ದರು. ಇಷ್ಟೆಲ್ಲಾ ಕೆಲಸಗಳಲ್ಲಿ ಇಡೀ ದಿನ ತಮ್ಮನ್ನು ತೊಡಗಿಸಿಕೊಂಡಿದ್ದರೂ, ಲಜ್ಜಾಪಟಾವೃತೆಯಾದ ಮಾತೆಯವರು ಯಾರ ಕಣ್ಣಿಗೂ ಬೀಳದಂತೆ ವಾಸಿಸುತ್ತಿದ್ದರು. ಒಮ್ಮೆ ಕಾಳೀ ಮಂದಿರದ ಖಜಾಂಚಿಯು ಹೀಗೆ ಹೇಳಿದನು: "ಶ್ರೀರಾಮಕೃಷ್ಣರ ಸಹಧರ್ಮಿಣಿ ಇಲ್ಲಿರುವರೆಂದು ಕೇಳಿರುವೆ. ಆದರೆ ಒಮ್ಮೆಯೂ ಅವರನ್ನು ನಾನು ಕಣ್ಣಿನಿಂದ ನೋಡಿಲ್ಲ" ಎಂದು. ಇನ್ನು ಕೊಲ್ಕತಾದಿಂದ ಬರುತ್ತಿದ್ದ ಮಹಿಳಾ ಭಕ್ತರು ಶ್ರೀಮಾತೆಯವರ ಕೋಣೆಯ ಮುಂದೆ ನಿಂತು ದುಃಖದಿಂದ, "ಆಹಾ! ನಮ್ಮ ಸೀತಾದೇವಿ ನಿಜಕ್ಕೂ ವನವಾಸಿನಿಯೇ ಆಗಿರುವಳು" ಎಂದು ಉದ್ಗರಿಸುತ್ತಿದ್ದರು. ಆದರೆ ಶ್ರೀಮಾತೆಯವರು ಮಾತ್ರ ಆ ದಿನಗಳನ್ನು ನೆನೆಸಿಕೊಂಡು ಹೀಗೆ ಹೇಳುತ್ತಿದ್ದರು: "ದಕ್ಷಿಣೇಶ್ವರದಲ್ಲಿದ್ದಾಗ, ಅಷ್ಟು ಅನಾನುಕೂಲತೆಗಳ ಮಧ್ಯದಲ್ಲಿದ್ದರೂ ಕೂಡ, ನನ್ನ ಹೃದಯದಲ್ಲಿ ಆನಂದದ ಅಮೃತಕಳಶವನ್ನೇ ತುಂಬಿಟ್ಟುಕೊಂಡಿರುವಂತೆ ಅನುಭವವಾಗುತ್ತಿತ್ತು."

### ಮಾತೃತ್ವದ ಆದರ್ಶ

ಶ್ರೀಮಾತೆಯವರು ಸನಾತನ ಆದರ್ಶಗಳಲ್ಲಿ ಪ್ರಮುಖವಾದ ಪಾತಿವ್ರತ್ಯ, ಪವಿತ್ರತೆ, ಸಹಿಷ್ಣುತೆ, ಕ್ಷಮಾಶೀಲತೆ, ವಿನಯ ಇವೆಲ್ಲದರ ಜೊತೆಗೆ ಶ್ರೇಷ್ಠ ಮಾತೃತ್ವದ ಮೂರ್ತರೂಪವೇ ಆಗಿದ್ದರು. ಈ ಮಾತೃತ್ವದ ವಿಕಾಸವನ್ನು ಶ್ರೀಮಾತೆಯವರಲ್ಲಿ ಎಳೆಯ ವಯಸ್ಸಿನಿಂದಲೇ ಕಾಣಬಹುದು. ಜಯರಾಂಬಾಟಿಯಲ್ಲಿ ದೊಡ್ಡ ಬರಗಾಲ ಬಂದಿತ್ತು. ಮಾತೆಯವರ ವಯಸ್ಸು ಆಗ ಕೇವಲ ಹತ್ತು ವರ್ಷ. ಅವರ ತಂದೆಯವರು ಬಡವರಾದರೂ ಹೃದಯಸಂಪನ್ನರು. ಆ ಪರಿಸ್ಥಿತಿಯಲ್ಲಿ ಅಲ್ಲಿನ ಜನರ ಕಷ್ಟವನ್ನು ಕಂಡು, ತಾವು ಕೂಡಿಸಿಟ್ಟಿದ್ದ ಧಾನ್ಯದಿಂದಲೇ ಕ್ಷಾಮಪೀಡಿತರಿಗೆ 'ಖಿಚುಡಿ' ಮಾಡಿ ಬಡಿಸುತ್ತಿದ್ದರು. ಹಸಿವಿನಿಂದ ಕಂಗಾಲಾದ ಜನರು ಬಿಸಿ ಬಿಸಿ ಆಹಾರವನ್ನು ಬೇಗ ಬೇಗ ತಿನ್ನಲು ಸಾಧ್ಯವಾಗದೆ ಇರುವುದನ್ನು ಕಂಡ ಚಿಕ್ಕ ಹುಡುಗಿ ಶಾರದೆಯ ಮಾತೃಹೃದಯ ಮಿಡಿಯಿತು. ಕೂಡಲೇ ಆಕೆ ತನ್ನ ಪುಟ್ಟ ಕೈಗಳಿಂದ ದೊಡ್ಡ ಬೀಸಣಿಕೆಯೊಂದನ್ನು ತಂದು, ಜೋರಾಗಿ ಗಾಳಿ ಹಾಕುತ್ತಾ ಆಹಾರವನ್ನು ತಣ್ಣಗೆ ಮಾಡಲು ಸಹಾಯ ಮಾಡುತ್ತಿದ್ದಳು.

ಶ್ರೀಮಾತೆಯವರ ದಕ್ಷಿಣೇಶ್ವರದ ಜೀವನದಲ್ಲಿ ಪ್ರಧಾನವಾಗಿದ್ದ ಕೆಲಸವೆಂದರೆ ಶ್ರೀರಾಮಕೃಷ್ಣರ ಸೇವೆಯೇ. ಅದೇನೂ ಅಷ್ಟೊಂದು ಸುಲಭವಾಗಿರಲಿಲ್ಲ. ಸಾಧಾರಣ ಮನುಷ್ಯರ ಸೇವೆ ಒಂದು ರೀತಿಯಾದರೆ, ದೇವರ ಸೇವೆಯ ರೀತಿಯೇ ಬೇರೆ. ಆದರೆ ದೇವರೇ ಮನುಷ್ಯನಾಗಿ ಅವತರಿಸಿ ಬಂದಾಗ, ಈ ದೇವಮಾನವನ ಸೇವೆ ಸುಲಭಸಾಧ್ಯವಾಗಿರಲಿಲ್ಲ. ದೈವೀಗುಣಸಂಪನ್ನರಾದ ಶ್ರೀಮಾತೆಯವರು ಮಾತ್ರವೇ ಈ ದೇವಮಾನವನ ಸೇವೆಯನ್ನು ಸರಿಯಾಗಿ ಮಾಡಲು ಸಮರ್ಥರಾಗಿದ್ದರು. ಅನೇಕ ವರ್ಷಗಳ ಕಾಲ ನಡೆಸಿದ ಬಹು ಕಷ್ಟಕರವಾದ ಸಾಧನೆಗಳಿಂದ ಶ್ರೀರಾಮಕೃಷ್ಣರ ಜೀರ್ಣಶಕ್ತಿ ತುಂಬಾ ಕೆಟ್ಟುಹೋಗಿತ್ತು. ಆದ್ದರಿಂದ ಅವರು ಕಾಳೀ ಮಾತೆಗೆ ನಿವೇದಿಸಿದ ಪ್ರಸಾದವನ್ನು ಸ್ವೀಕರಿಸಲಾಗುತ್ತಿರಲಿಲ್ಲ. ಅವರಿಗಾಗಿ ಸರಿಹೊಂದುವ ಪಥ್ಯದ ಅಡುಗೆ ಮಾಡುವುದರಲ್ಲಿ ಶ್ರೀಮಾತೆಯವರು ತಲ್ಲೀನರಾಗಿದ್ದರು. ಅದಕ್ಕಿಂತ ಹೆಚ್ಚಾಗಿ, ಅವರಿಗೆ ಊಟ ಮಾಡಿಸುವ ವಿಷಯದಲ್ಲಿ ಶ್ರೀಮಾತೆಯವರು ತುಂಬಾ ಎಚ್ಚರಿಕೆಯಿಂದ ಇರಬೇಕಾಗಿತ್ತು. ನಿರಂತರವಾಗಿ ಉಚ್ಚಭಾವದ ಅವಸ್ಥೆಯಲ್ಲಿ ಇರುತ್ತಿದ್ದ ಶ್ರೀರಾಮಕೃಷ್ಣರ ಮನಸ್ಸನ್ನು ಕೆಳಮಟ್ಟಕ್ಕೆ ಇಳಿಸಿ, ಊಟ ಮಾಡಿಸುವ ಕೌಶಲ ಶ್ರೀಮಾತೆಯವರಿಗೆ ಮಾತ್ರ ಚೆನ್ನಾಗಿ ಗೊತ್ತಿತ್ತು.

ಒಂದು ದಿನ ಶ್ರೀಮಾತೆಯವರು ಶ್ರೀರಾಮಕೃಷ್ಣರ ಮಧ್ಯಾಹ್ನದ ಊಟವನ್ನು ತೆಗೆದುಕೊಂಡು ಹೋಗುತ್ತಿರುವಾಗ, ಭಕ್ತ ಮಹಿಳೆಯೊಬ್ಬಳು, "ಅಮ್ಮಾ, ಅವರ ಊಟವನ್ನಿಂದು ನಾನು ಕೊಂಡೊಯ್ಯುವೆ" ಎಂದಳು. ಮಾತೆಯವರು ಆಕೆಯ ಇಚ್ಛೆ ಪೂರ್ಣವಾಗಲು ಅವಕಾಶವಿತ್ತರು. ಎಂದಿಗೂ ಅವರ ಮನಸ್ಸಿನಲ್ಲಿ, ಶ್ರೀರಾಮಕೃಷ್ಣರ ಸೇವಾಧಿಕಾರಿ ತಾವೊಬ್ಬರೇ ಎಂಬ ಭಾವನೆ ಇರಲಿಲ್ಲ. ಊಟದ ಸಮಯದಲ್ಲಿ ಶ್ರೀರಾಮಕೃಷ್ಣರ ದರ್ಶನದ ಅವಕಾಶ ತಮಗೆ ತಪ್ಪುವುದಲ್ಲಾ ಎಂದು ಅವರು ಒಮ್ಮೆಯೂ ಭಾವಿಸಲಿಲ್ಲ. ಆದರೆ, ಆ ದಿನಗಳಲ್ಲಿ ಪವಿತ್ರತಾಸ್ವರೂಪರಾದ ಶ್ರೀರಾಮಕೃಷ್ಣರಿಗೆ ಅಪವಿತ್ರ ವ್ಯಕ್ತಿಗಳು ಸ್ಪರ್ಶಿಸಿದ ಆಹಾರವನ್ನು ಸ್ವೀಕರಿಸಲಾಗುತ್ತಿರಲಿಲ್ಲ. ಆದ್ದರಿಂದ ಶ್ರೀರಾಮಕೃಷ್ಣರು ಮುಂದೆ ಎಂದಿಗೂ ಬೇರೆಯವರ ಮೂಲಕ ಊಟ ಕಳುಹಿಸಬಾರದೆಂದು ಮಾತುಕೊಡಲು ಶ್ರೀಮಾತೆಯವರನ್ನು ಒತ್ತಾಯಿಸಿದರು. ಆಗ ಮಾತೆಯವರು ತುಂಬಾ ವಿನಯದಿಂದ, "ನಿಮ್ಮ ಊಟವನ್ನು ನಾನೇ ತರಲು ಸದಾ ಪ್ರಯತ್ನಿಸುವೆ. ಆದರೆ ಯಾರಾದರೂ ನನ್ನನ್ನು 'ಅಮ್ಮ' ಎಂದು ಕರೆದು ಏನನ್ನಾದರೂ ಕೇಳಿದರೆ, ಅದನ್ನು ನಾನು ಎಂದಿಗೂ ನಿರಾಕರಿಸಲಾರೆ.